ಕರ್ನಾಟಕ ವಿಧಾನ ಸಭೆ

ಸೋಮವಾರ 30ನೇ ಜುಲೈ 2007ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 18 ನಿಮಿಷಗಳಿಗೆ ಸಮಾವೇಶಗೊಂಡಿತು.
ಅಧ್ಯಕ್ಷರು : ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

(ಬೆಳಿಗ್ಗೆ 11–00 ಗಂಟೆ)

1. ವಿತ್ತೀಯ ಕಾರ್ಯಕಲಾಪಗಳು :

ಅ) 2007–2008ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ :

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳು.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು 5–10 ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಈಗಾಗಲೇ ಸರ್ಕಾರದ ಕಡೆಯಿಂದ ಉತ್ತರ ಕೊಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಮೊನ್ನೆ ಮಾನ್ಯ ರೇವಣ್ಣನವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಸರ್ಕಾರ ಕೊಡುವ ಮಧ್ಯೆದಲ್ಲಿ ಮತ್ತೊಮ್ಮೆ ತಾವು ಮಾತನಾಡಬೇಕೆಂದರೆ ಹೇಗೆ?

ಶ್ರೀ ಧರ್ಮಸಿಂಗ್ : 2 ನಿಮಿಷಗಳ ಕಾಲ ಮಾತ್ರ ಮಾತನಾಡುತ್ತೇನೆ.

ಅಧ್ಯಕ್ಷರು : ತಾವೇನೋ ಹೊಸ ಸಂಪ್ರದಾಯ ಹಾಕಬೇಕೆಂದು ಹೊರಟಿದ್ದೀರಿ. ಆಯಿತು, ಮಾತನಾಡಿ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಜೆಟ್ ಮೇಲೆ ಸಮಗ್ರವಾಗಿ ಎಲ್ಲರೂ ಕೂಡ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಪ್ರಕಾಶ್‌ರವರಿಗೆ ನಾನು ಹೇಳತಕ್ಕದ್ದು ಏನೆಂದರೆ, ಇಷ್ಟೊಂದು ವಿವರವಾದ ಚರ್ಚೆ ಕಳೆದ 3–4 ಬಜೆಟ್‌ಗಳ ಮೇಲೆ ಯಾವಾಗಲೂ ಕೂಡ ಆಗಿರಲಿಲ್ಲ. ಎಲ್ಲಾ ಹಿರಿಯ ಶಾಸಕರು ಮತ್ತು ವಿಶೇಷವಾಗಿ ನಮ್ಮ ಯುವ ಶಾಸಕರು ಬಜೆಟ್ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರು ಸಾಲ ಮನ್ನಾ, ಸಾರಾಯಿ ನಿಷೇಧ ಸೇರಿದಂತೆ ಎಲ್ಲಾ ವಿಚಾರಗಳ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಲಿದ್ದಾರೆ ಎಂದು ನಾನು

ಭಾವಿಸುತ್ತೇನೆ. ನಾನೇಕೆ ಇಲ್ಲಿ ಮಾತನಾಡಲು ನಿಂತಿದ್ದೇನೆ ಎಂದರೆ, ಕಳೆದ ಬಜೆಟ್‌ನಲ್ಲಿ ತಾವು ಏನೆಲ್ಲಾ ಆಶ್ವಾಸನೆಗಳನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿದ್ದೀರೋ, ಅದನ್ನೆಲ್ಲಾ ಈಡೇರಿಸಿಲ್ಲ. ಸಾಲ ಮನ್ನಾ ಬಾಬ್ತು 2300 ಕೋಟಿ ರೂ.ಗಳನ್ನು ಸರ್ಕಾರ ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕಾಗಿತ್ತು. ಆ ಬಗ್ಗೆ ಎಲ್ಲರೂ ಕೂಡ ಮಾತನಾಡಿದ್ದಾರೆ. ಆದರೆ, ಇಲ್ಲಿಯವರೆಗೆ ತಾವು 750 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಿರಿ. ಇವತ್ತು ಎಲ್ಲಾ ಕಡೆ ಬಿತ್ತನೆ ಕೆಲಸ ಆರಂಭವಾಗಿದೆ, ರೈತರು ಸಂಕಟದಲ್ಲಿದ್ದಾರೆ, ಯಾವ ರೀತಿಯಾಗಿ ಸಾಲ ಮನ್ನಾದಿಂದ ರೈತರಿಗೆ ಸಹಾಯವಾಗುತ್ತಿದೆ ಎಂದು ತಾವು ಒಂದು ಮಾತನ್ನು ಹೇಳಬೇಕು, ಯಾವ ರೀತಿಯಾಗಿ ಈ ಬಗ್ಗೆ ವ್ಯವಸ್ಥೆ ಮಾಡುತ್ತೀರಿ? ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡನೆಯಾಗಿ, ಈಗಾಗಲೇ ಸಾರಾಯಿ ಮಾರಾಟವನ್ನು ನಿಷೇಧ ಮಾಡಿದೀರಿ, ನಮ್ಮ ಹೆಗ್ಡೆಯವರು ಕೂಡ ಹೇಳಿದ್ದಾರೆ. 4500–5500 ಪಂಚಾಯತಿಗಳೂ ರಾಜ್ಯದಲ್ಲಿವೆ. ಇವತ್ತು ಪಾಕೆಟ್ ಮುಖಾಂತರವಲ್ಲ, ಬಾಟ್ಲಿ ಮುಖಾಂತರ ಮಾಡುವುದನ್ನು ತಾವು ಲೆಕ್ಕ ಹಾಕುತ್ತಿದ್ದೀರಿ. ಬ್ರಿವರೇಜ್ ಕಾರ್ಪೊರೇಷನ್ ತೆಗೆಯಬೇಕೆನ್ನುವುದು ಪತ್ರಿಕೆಯಲ್ಲಿ ಬಂದಿದೆ, ಆ ಒಂದು ಚಿಂತನೆಯೂ ಕೂಡ ನಡೆಯುತ್ತಿದೆ. ಅದರ ಬಗ್ಗೆ ಸ್ಪಷ್ಟಪಡಿಸಬೇಕು. ಇವತ್ತು ಸ್ತ್ರೀಶಕ್ತಿಗಳಿಗೆ, ಹೆಣ್ಣುಮಕ್ಕಳಿಗೆ ಮತ್ತು ಪರಿಶಿಷ್ಟಜಾತಿ/ ಪರಿಶಿಷ್ಟ ಜನಾಂಗಕ್ಕೆ ತೊಂದರೆಯಾಗುತ್ತಿಲ್ಲ 50–60 ವರ್ಷಗಳಲ್ಲಿ ತೆಗೆದುಕೊಳ್ಳುವ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಅದಕ್ಕೆ ಸಾಕಷ್ಟು ಮಠಾಧಿಪತಿಗಳು, ಸಾರ್ವಜನಿಕರು ಮತ್ತು ಇವತ್ತು ಗಾಂಧಿಭವನದಲ್ಲಿ ನಡೆದ ಸಮಾರಂಭಕ್ಕೆ ಮುಖ್ಯಮಂತ್ರಿಗಳು ಹೋದಾಗ, ನಿಮ್ಮ ನೇತೃತ್ವದಲ್ಲಿ ಇಂಥ ಕೆಲಸವಾಗಿದೆ ಎಂದು ಶಹಭಾಷ್‌ಗಿರಿಯನ್ನು ಕೂಡ ಮಾಡಿದ್ದಾರೆ. ಆದರೆ ಅದರ ಬದಲಾಗಿ ಪರ್ಯಾಯ ವ್ಯವಸ್ಥೆ ಏನೆಂದರೆ, ಇವತ್ತಿನ ದಿವಸ ಕಂಡುಹಿಡಿಯತಕ್ಕಂಥ ಬಾಟ್ಲಿಂಗ್, ಸಿಎಲ್–2ಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ರೀತಿಯಲ್ಲಿ ಏನು ಚಿಂತನೆ ನಡೆಸುತ್ತಿದ್ದಿರಿ, ಆ ಬಗ್ಗೆ ಇವತ್ತು ಯಡಿಯೂರಪ್ಪನವರು ಹೇಳಬೇಕು. ಮೊನ್ನೆ ಸಹಕಾರಿ ಸಮ್ಮೇಳನದಲ್ಲಿ ನಾವು ಮತ್ತು ಮುಖ್ಯಮಂತ್ರಿಗಳು ಇದ್ದೆವು. ನಮ್ಮ ಕೇಂದ್ರ ಮಂತ್ರಿಗಳಾದ ಶರತ್ ಪವಾರವರು ಕೂಡ ಹೇಳಿದ್ದಾರೆ, ನಾನು ಕೂಡ ಏನು ಹೇಳಿದ್ದೇನೆಂದರೆ, ತಾವು ರಾಷ್ಟ್ರಮಟ್ಟದ ಕೃಷಿ ಸಚಿವರಾಗಿ, ವಿದರ್ಭ ಪ್ಯಾಕೇಜ್ ಅನ್ನು ಹೇಗೆ ಕೊಡಲಾಗಿದೆ, ಹಾಗೆ ಕರ್ನಾಟಕದ 5 ಜಿಲ್ಲೆಗಳಲ್ಲಿ 2680 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಅದರಲ್ಲಿ

ರೂ.1600 ಕೋಟಿ ಕೇಂದ್ರದಿಂದ ಕೂಡ ಬರುತ್ತಿದೆ. ನಮ್ಮ ರೇವಣ್ಣನವರು ಅದರ ಉಪಸಮಿತಿಯ ಅಧ್ಯಕ್ಷರಾಗಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣವೇನು ಬರುತ್ತಿದೆ. ಇದರಲ್ಲಿ you have to prepare an action plan ನೀರಾವರಿಗೆ ಕೂಡ ರೂ.800 ಕೋಟಿ ಬರುತ್ತಿದೆ. ಮಾನ್ಯ ಸದಸ್ಯರಾದ ನಮ್ಮ ಶಿವಾನಂದ ಪಾಟೀಲ್ ಅವರು ನೀರಾವರಿ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ, ಮಾನ್ಯ ಸದಸ್ಯರಾದ ಜೀವಿಜಯರವರು ಅರಣ್ಯ ಇಲಾಖೆ ಬಗ್ಗೆಯೂ ಕೂಡ ಮಾತನಾಡಿದ್ದಾರೆ. ಕಷ್ಟವೇನೆಂದರೆ, ಇವತ್ತು 28 ಇಲಾಖೆಗಳ ಬೇಡಿಕೆ ಚರ್ಚೆಗೆ ಬರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು, You have to direct all the ministers. They have to be here, ಪತ್ರಿಕೆಯಲ್ಲಿ ಓದುವುದು ಬೇರೆ. ನೇರವಾಗಿ ನಾವೇನು ಹೇಳುವ ಬಾಡಿ ಲಾಂಗ್ವೇಜ್ ಆಗಲಿ, ರೀತಿ ನೀತಿಯಾಗಲಿ, ಜನಾಭಿಪ್ರಾಯವನ್ನು ಮಂಡಿಸುವ ಸಮಯದಲ್ಲಿ ಮಂತ್ರಿಗಳು ಇರಬೇಕು, ಯಾರು ಇರಲಿಲ್ಲ, ನೀರಾವರಿ ಸಚಿವರಾದ ಈಶ್ವರಪ್ಪನವರು ಕೂಡ ಇರಲಿಲ್ಲ. ಈ ಸಂದರ್ಭದಲ್ಲಿ ಸಾರಾಯಿ ನಿಷೇಧ ಮಾಡಿದ್ದರಿಂದ ಅವರಿಗೆ ರೂ. 1902 ಕೋಟಿ ರೂಪಾಯಿಗಳು ಕಡಿಮೆಯಾಗುತ್ತಿದೆ, ಸಿಎಲ್-2 ಲೈಸೆನ್ಸ್ ಕೊಡಲು ಮುಂದಾಗಿದ್ದೀರೆಂಬುದು ಕೂಡ ವರದಿ ಬಂದಿದೆ. ಇವತ್ತು ಒಟ್ಟಾರೆ ತಮ್ಮ ಖಜಾನೆಗೆ 5000 ಕೋಟಿಗಿಂತ ಹೆಚ್ಚು ಏನು ಕಡಿಮೆಯಾಗುತ್ತಿದೆ, ಅದಕ್ಕೆ ತಾವು ಪರ್ಯಾಯ ವ್ಯವಸ್ಥೆಯನ್ನು ಮಾಡಲೇ ಬೇಕು. ಬೇರೆ ಕಡೆ ಜಿಲ್ಲೆಗಳಲ್ಲಿ ಸಾರಾಯಿ ಬಗ್ಗೆ ಎಷ್ಟಾಗಿದೆ? ನಿಮಗೆ ಪೊಲೀಸ್ ಇಲಾಖೆಯ ಸಿಬ್ಬಂದಿ ಸಹಾಯ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ, ಎಷ್ಟೋ ಕಡೆ ಇವತ್ತು ಕಂಡುಹಿಡಿದಿದ್ದಾರೆ. ನಮ್ಮ ಉತ್ತರ ಕರ್ನಾಟಕದಲ್ಲಿ ಸಾರಾಯಿ ಮಾಡುವವನ ಶವ ಇಲ್ಲಿ ಬಂದಿತು, ಅದು ಇಲ್ಲವೆನ್ನುವ ರೀತಿಯಲ್ಲಿ ಎಂ.ಪಿ.ಪ್ರಕಾಶ್ ಅವರು ಹೇಳುತ್ತಿದ್ದಾರೆ. That is a different matter. ಆದರೂ ಇವತ್ತು ಸಾರಾಯಿ ನಿಷೇಧ ಮಾಡುವಾಗ ಅದರ ಪರಿಣಾಮಗಳೇನು, ಅವುಗಳ ಆಗುಹೋಗುಗಳು ಏನು ಎಂದು ನೀವು ಚಿಂತನೆ ಮಾಡಬೇಕಾಗುತ್ತದೆ. ಅದು ಇವತ್ತು ಯಶಸ್ವಿಯಾಗಿ ರಾಜ್ಯದಲ್ಲಿ ನಡೆಯುತ್ತಿಲ್ಲವೆನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಹಣಕಾಸಿನ ಮುಗ್ಗಟ್ಟು ಬಂದಿದೆ. ರಿಸೋರ್ಸಸ್ ಮೊಬಿಲೈಸೇಷನಲ್ಲಿ, ಇರಿಗೇಷನ್, ಸೋಷಿಯಲ್ ಸೆಕ್ಟಾರ್, ಪವರ್ ಹಾಗೂ ಕೃಷಿ ಸೆಕ್ಟಾರ್‌ಗೆ ನೀವು ಹೆಚ್ಚಿನ ಹಣವನ್ನು ಇಟ್ಟಿಲ್ಲ. ನಮ್ಮ ಕಾಲದ್ದು ನೋಡಿ, ನಿಮ್ಮ ಕಾಲದ್ದು

ನೋಡಿ, ಬಹಳ ಕಡಿಮೆಯಾಗಿದೆ. ಎಸ್.ಎಂ.ಕೃಷ್ಣರವರ ಕಾಲದಲ್ಲಿ ರೂ. 3024 ಕೋಟಿ ಇದ್ದರೆ ನಾನು ಮುಖ್ಯಮಂತ್ರಿಯಾಗಿದ್ದಾಗ ರೂ. 3924 ಕೋಟಿ, ಅಂದರೆ ನಾವು ರೂ. 900 ಕೋಟಿಯನ್ನು ಹೆಚ್ಚಿಗೆ ಮಾಡಿದ್ದೇವೆ. ಇವತ್ತು ಇರಿಗೇಷನ್ ಗೆ 29% ಇದ್ದರೆ, That has been reduced to 17%. ಇದನ್ನು ಅವರೇ ಒಪ್ಪಿದ್ದಾರೆ. ಇವತ್ತು ನೀವು ಗುಡಿಗುಂಡಾರಗಳಿಗೆ ಹೆಚ್ಚಿನ ಹಣವನ್ನು ಕೊಡದೇ ಸಾಮಾನ್ಯ ಜನರಿಂದ ತೆರಿಗೆಯನ್ನೇನು ವಸೂಲ್ಮಾಡ ಲಾಗುತ್ತಿದೆ, ಹಾಗಾಗಿ ರಾಜ್ಯದ ಅಭಿವೃದ್ಧಿಯಾಗಬೇಕು, ರೈತರ ಸಮಸ್ಯೆ ಬಗೆಹರಿಯಬೇಕು. ಈ ರೀತಿಯಲ್ಲಿ ಈ ಕೋರ್ ಸೆಕ್ಟರಾ ಏನಿದೆ, ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನನ್ನ ಒಂದು ವಾದ. ಇವತ್ತು ಈ ಬಗ್ಗೆ ಬಹಳಷ್ಟು ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ರಾಜ್ಯದ ಒಟ್ಟು ಜಮೆಯಲ್ಲಿ ಕೇಂದ್ರದ ಪಾಲು ಎಷ್ಟಿದೆ ಎಂದರೆ ರೂ. 12213 ಕೋಟಿ. ಈ ಸಾರಿ ರೂ. 2403 ಕೋಟಿ ಹಣ ಬಂದಿದೆ. LIC ಆಗಲಿ, RBI ಆಗಲಿ, GIC ಕಡೆಯಿಂದಲೂ ಕೂಡ ರೂ.1990 ಕೋಟಿ, LIC ಯಿಂದ ರೂ. 465 ಕೋಟಿ ಸೇರಿದಂತೆ ಒಟ್ಟು ಸಾಲದ ರೂಪದಲ್ಲಿ ಪಡೆದುಕೊಂಡಿದ್ದು ರೂ. 2455 ಕೋಟಿ ಕೇಂದ್ರದಿಂದ ಹಣ ಬಂದಿದೆ. ಇವತ್ತು ಬಜೆಟ್‌ನಲ್ಲಿ ಒಟ್ಟು ರೂ. 40762 ಕೋಟಿ ಏನಿದೆ, ಇವತ್ತು ಸಂಪನ್ಮೂಲದಿಂದ ಒದಗಿಸಿದ್ದು ರೂ. 26,090 ಕೋಟಿ, 64% ನಿಮ್ಮ ಪಾಲಿರುವುದು. ಒಟ್ಟಾರೆ ಇವತ್ತು ನಿಮ್ಮ ರಾಜ್ಯ ಸರ್ಕಾರದ ಪಾಲೇನಿದೆ, ಕೇಂದ್ರ ಸರ್ಕಾರದ ಪಾಲೇನಿದೆ ಎಂಬುದನ್ನು ಕೂಡ ಸ್ಪಷ್ಟಪಡಿಸಬೇಕು ಮತ್ತು ಸಾಲ ಮರುಪಾವತಿ ಕೂಡ ಮಾಡಬೇಕಾಗಿದೆ. ಹಣಕಾಸೇನಿದೆ, ಅದು ಹುಡುಗಾಟಿಕೆಯಲ್ಲ. ಇವತ್ತು ನಿಮ್ಮ ಪಕ್ಷದ ಅಜೆಂಡಾ ಇಟ್ಟುಕೊಂಡು ಮನಸ್ಸಿಗೆ ಬಂದಂತೆ ಘೋಷಣೆ ಮಾಡಿದ್ದಾರೆಂದು ನಾವು ಹೇಳಿಲ್ಲ, ನಿಮ್ಮ ಸಂಪುಟದ ಮಂತ್ರಿಗಳೇ ಹೇಳಿದ್ದಾರೆ. ಅದಕ್ಕೆ ತಾವು ಈ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕು. ಇವತ್ತು ಯಾವ ರೀತಿಯಲ್ಲಿ ರೈತರ ಸಾಲ ಮನ್ನಾ ಮಾಡುವ ರೀತಿಯಲ್ಲಿ ಹೊರಟ್ಟಿದ್ದೀರೆಂಬುದನ್ನು ಕೂಡ ಬಿಡಿಸಿ ಹೇಳಬೇಕು, ಯಾವ ಡಿಸಿಸಿ ಬ್ಯಾಂಕ್, ಕೋ-ಆಪರೇಟಿವ್ ಬ್ಯಾಂಕ್ ಕೆಲಸ ಮಾಡುವ ರೀತಿಯಲ್ಲಲ್ಲ. ಅದಕ್ಕೆ ಈ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕೆಂದು ಹೇಳಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು, ಸದನದಲ್ಲಿ 7 ಬಜೆಟ್ ಅನ್ನು ಮಂಡಿಸಿದ್ದಾರೆ, ಬಜೆಟ್ ಬಗ್ಗೆ 3 ಗಂಟೆ ಕಾಲ ಮಾತನಾಡಿ ಸಾಕಷ್ಟು ಹೇಳಿದ್ದಾರೆ, ರಮೇಶ್‌ಕುಮಾರ್

ಅವರು ಹೇಳಿದ್ದಾರೆ, ನಮ್ಮ ಪಕ್ಷದ ಅಧ್ಯಕ್ಷರು ಕೂಡ ಹೇಳಿದ್ದಾರೆ. ಧರ್ಮಸಿಂಗ್ ಮತ್ತು ಖರ್ಗೆಯವರು ದೇಗುಲದಲ್ಲಿ ದೆವ್ವವನ್ನು ಇಡುವುದಕ್ಕೆ ಹೊರಟಿದ್ದಾರೆನ್ನುವ ಮಾತನ್ನು ಪದೇಪದೇ ಹೇಳಿದರು. ನಮಗೆ ದೇಗುಲದಲ್ಲಿ ದೆವ್ವವೂ ಬೇಕಾಗಿಲ್ಲ, ಆ ಬಗ್ಗೆ ಹೆಚ್ಚಿನ ನಂಬಿಕೆ ಇಡತಕ್ಕಂಥವರಲ್ಲ. ಇವತ್ತು ಸಾಮಾನ್ಯ ಜನರ ತೆರಿಗೆಯನ್ನು ತೆಗೆದುಕೊಂಡು ಗುಡಿಗುಂಡಾರಗಳಿಗೆ ಕೊಡುವ ರೀತಿ ರಾಜ್ಯದ ಸಾಮಾನ್ಯ ಜನರಿಗೆ ಮತ್ತು ಕಡುಬಡವರಿಗೆ ತೊಂದರೆ ಆಗಬಾರದೆಂದು ಇವತ್ತು ನಾವು ಹೇಳಿದ್ದೇವೆ, ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ದಿ:ದೇವರಾಜ ಅರಸು ಅವರು ಕಾಲದಲ್ಲಿ, ಎಂ.ವೈ.ಘೋರ್ಪಡೆಯವರು ಅರ್ಥಸಚಿವರಾಗಿದ್ದರು.

(11-30 AM)

ಅಲ್ಲಿಂದ ಹಿಡಿದು, ಇವತ್ತು ಮಾನ್ಯ ಸಿದ್ದರಾಮಯ್ಯನವರು ನಮ್ಮ ಕಾಲದಲ್ಲಿ ಅರ್ಥಸಚಿರಾಗಿದ್ದರು. ಮೊಟ್ಟ ಮೊದಲನೆಯದಾಗಿ ಆರು ಪ್ರತಿಶತ ಬಡ್ಡಿ ದರದ ಮೇಲೆ ರೈತರಿಗೆ ಸಾಲ ನೀಡತಕ್ಕಂತಹ ರೀತಿಯಲ್ಲಿ ನಾವು ಏನು ಕೆಲಸ ಪ್ರಾರಂಭ ಮಾಡಿದ್ದೇವೆ, ಆ ಬಗ್ಗೆ ಹಾಸನದಲ್ಲಿ ಮಾನ್ಯ ಶರದ್ ಪವಾರ ರವರು ಬಂದಾಗ ಬಹುರಂಗವಾಗಿ ಹೇಳಿದರು. ಯಾವ ರಾಜ್ಯದಲ್ಲಿ ಕೂಡ ಈ ತರಹದ ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಟ್ಟಿಲ್ಲ. Karnataka is the only Government ಅವರು ಮುಂದೆ ಬಂದಿದ್ದಾರೆ ಎನ್ನತಕ್ಕಂತಹ ಮಾತನ್ನು ಕೂಡ ಹೇಳಿದ್ದಾರೆ, ರಾಷ್ಟರ ಮಟ್ಟದಲ್ಲಿ ನಾವು Plannig Commission ಎದುರಿಗೆ ಹೋದಾಗ ಕೂಡ they have also appreciated. 2004–05ರಲ್ಲಿ, 2005–06 ರಲ್ಲಿ ನಮ್ಮ Plannig Commission ಏನಿದೆ, ಎಲ್ಲಾ ಕಡೆ ಸರ್ಕಾರಕ್ಕೆ ಹೆಚ್ಚಿನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನಮ್ಮ plan size ಕೂಡ ನಾವು ದೊಡ್ಡದಾಗಿ ಮಾಡಿದ್ದೇವೆ. ಬಜೆಟ್ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದಾರೆ, ಕೊನೆಗೆ ಎರಡು ಮಾತುಗಳನ್ನು ಹೇಳಬೇಕೆಂದು ನಾನು ಹೊರಟಿದ್ದೇನೆ. General Administrationನಲ್ಲಿ ಬಹಳಷ್ಟು ಮಾತುಗಳು ಪ್ರಸ್ತಾಪವಾಗಿವೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದೆ. ಇರಲಿ, ಅದು ಜನರ ಮನ್ನಣೆಗೆ ಬಂದು ಆಗಿದೆ, ನಮ್ಮ ಜೊತೆಯಲ್ಲಿ ಮಾನ್ಯ ಕುಮಾರಸ್ವಾಮಿ ಯವರು ಪಕ್ಷದ ಕಾರ್ಯಾಧ್ಯಕ್ಷರಾಗಿದ್ದರು. To prevent BJP we have

become one. Progressive ಆಗಿ ಪ್ರಗತಿಪರ ವಿಚಾರಧಾರೆ ಯಾವ ರೀತಿ ರಾಷ್ಟ್ರಮಟ್ಟದಲ್ಲಿ ಇದೆ, ಕರ್ನಾಟಕ ರಾಜ್ಯದಲ್ಲಿಯೂ ಇರಬೇಕೆಂದು ವಾದ. ಮತ್ತೆ ಏನು ಬಂದಿತ್ತೋ ಗೊತ್ತಾಗಲಿಲ್ಲ. ಇವತ್ತು BJP ಅವರು ಅವರೊಡನೆ ಕೂಡಿ ಮುಂದೆ ಹೋಗಿದ್ದಾರೆ. ಮೂರನೇ ಹಸ್ತಾಂತರ ಮಾಡುವುದು ಒಂದು ದೊಡ್ಡ ವಾದವಾಗಿದೆ.

ಶ್ರೀ ಆರಗ ಜ್ಞಾನೇಂದ್ರ : ಕಾಂಗ್ರೆಸ್‌ನ್ನು ಹೊರಗಿಡುವಂತಹ ಜನರ mandateಗೆ ಅನುಗುಣವಾಗಿ ಈ ಸರ್ಕಾರ ರಚನೆ ಆಗಿದೆ. ಅದು ಮುಂದುವರೆಯುತ್ತದೆ.

ಶ್ರೀ ಎಸ್.ಧರ್ಮಸಿಂಗ್ : ಏಕೆ ಸುಮ್ಮನೆ ಹೇಳುತ್ತೀರಿ? ಮನಸ್ಸಿನಲ್ಲಿ ಎಷ್ಟೋ ಅಸಂತೋಷ ಇದೆ, ಸುಮ್ಮನೆ ಏಕೆ ಹೇಳುತ್ತೀರಿ? ಈ Administration ಹೇಗಿದೆ, ನಾವು ಬಹಳಷ್ಟು ಸಲ ಮಾನ್ಯ ಕುಮಾರಸ್ವಾಮಿ ಯವರಿಗೆ ಹೇಳಿದ್ದೇವೆ, ನಿಮಗೆ ಒಳ್ಳೆಯ ಅವಕಾಶ ಸಿಕ್ಕಿದೆ, ವಯಸ್ಸು ಸಣ್ಣದು ಇದೆ, ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಬೇಕು, ಜನಾಭಿಪ್ರಾಯ ಮೂಡಿಸತಕಂಥಾದ್ದು ಮಾಡಬೇಕೆಂದು ಹೇಳಿದ್ದೇವೆ. ನಾವು ಬಹಳಷ್ಟು ಸಲ ಹೇಳಿದ್ದೇವೆ, ಗ್ರಾಮ ವಾಸ್ತವ್ಯ ಬಿಟ್ಟು, ಸದನದಲ್ಲಿ ವಾಸ್ತವ್ಯ ಮಾಡಿದರೆ, ಏನೇನು ಅನಿಸಿಕೆಗಳಿವೆ ಎಂದು ಗೊತ್ತಾಗುತ್ತದೆ. ಆಡಳಿತ ನಡೆಸುವುದಕ್ಕೆ ಒಳ್ಳೆಯದಾಗುತ್ತದೆ. ಇವತ್ತು ಪ್ರತಿ ಹಂತದಲ್ಲಿ ಏನಾಗಿದೆ, ನೈಸ್ ವಿಚಾರದಲ್ಲಿ Supreme Court ಇವತ್ತು ಸರ್ಕಾರಕ್ಕೆ ಛೀಮಾರಿ ಹಾಕಿದೆ. ನೈಸ್‌ನ್ನು ಬೇರೆ ಯಾವುದೋ ಕಂಪನಿಗೆ ಕೊಡುವುದಕ್ಕೆ ಹೊರಟಿದ್ದಾರೆ, ಅದರ ಬಗ್ಗೆ ನಾವು ನಾಳೆ ನಾಡಿದ್ದು ಪ್ರಸ್ತಾಪ ಮಾಡುತ್ತೇವೆ. ಆದರೆ ಹೇಳತಕ್ಕಂತಹ ತಾತ್ಪರ್ಯ ಇಷ್ಟೆ, ಇವತ್ತು ಮೊಟ್ಟ ಮೊದಲಯದಾಗಿ ದಂಡ ವಿಧಿಸತಕ್ಕಂತಹ ರೀತಿಯಲ್ಲಿ Supreme Court ಸರ್ಕಾರದ ಧೋರಣೆ ಬಗ್ಗೆ, ಸರ್ಕಾರ ಸರಿಯಾದ ರೀತಿಯಲ್ಲಿ ಪಾತ್ರ ನಿರ್ವಹಿಸುತ್ತಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಇವತ್ತು ಸರ್ಕಾರ ನಡೆಸತಕ್ಕಂತಹ ತಾವು ಕರ್ನಾಟಕ ಸರ್ಕಾರದ ಮೇಲೆ ಮತ್ತು ಕರ್ನಾಟಕದ ಜನತೆ ಮೇಲೆ Supreme Court ನಿಂದ ಈ ತರಹದ ಅಪವಾದ ಬಂದರೆ ಹೇಗೆ? ಇವತ್ತು ಚುನಾವಣೆ ನಡೆಸತಕ್ಕಂತಹ ವಿಚಾರದಲ್ಲಿ the Election Commission has written two or three letters to the Government. ಸರ್ಕಾರ ಅದಕ್ಕೆ ಉತ್ತರ ಕೊಡಲಿಲ್ಲ. ರಾಜ್ಯಪಾಲರನ್ನು ಭೇಟಿ ಆದರು. ನಿಮ್ಮ ಸರ್ಕಾರಕ್ಕೆ ಕೇಳಿ ಎಂದರು. ಕೊನೆಗೆ

Election Comissionನವರು High Courtಗೆ ಹೋದರು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುತ್ತದೆಯೇ ಎಂದಾಗ ಇಲ್ಲವೆಂದು ಹೇಳಿದರು. ರಾಜ್ಯಪಾಲರು ಸರ್ಕಾರಕ್ಕೆ ಇವತ್ತು ಎಷ್ಟು ಸಾರಿ ಛೀಮಾರಿ ಹಾಕಬೇಕು, Is it an administration? ಇದು ಆಡಳಿತ ನಡೆಸತಕ್ಕಂತಹ ರೀತಿ ನೀತಿ ನಾ? ರಾಜೀವ್ ಗಾಂಧಿಯವರ ಅಧಿಕಾರ ವಿಕೇಂದ್ರೀಕರಣದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಸಾಮಾನ್ಯ ಜನರಿಗೆ ಅಧಿಕಾರ ಕೊಡತಕ್ಕಂತಹ concept ಏನಿತ್ತು, ಆ ಬಗ್ಗೆ Supreme Courtನವರೂ ಕೂಡ ಆದೇಶ ಮಾಡಿದ್ದಾರೆ. ಸದನದಲ್ಲಿ ಮಾನ್ಯ ಎಂ.ಪಿ.ಪ್ರಕಾಶ್‌ರವರು ಹೇಳಿದರು, ಅದರ ಬಗ್ಗೆ ಮತ್ತೆ ನಾವು ವಿಚಾರ ಮಾಡೋಣ. ಮಾನ್ಯ ಉದಾಸಿಯವರಿದ್ದಾರೆ, ಉದಾಸಿಯವರಿಗೆ ಯಾವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಅಧಿಕಾರಗಳನ್ನು ಮೊಟಕುಗೊಳಿಸ ತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಎಲ್ಲಾ ಕಡೆ ಬೀಗ ಹಾಕಿದ್ದಾರೆ. ಗುಲ್ಬರ್ಗಾದಲ್ಲಿ, ಗದಗ್, ಮಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಆಗಿದೆ. ಎಲ್ಲಾ ಕಡೆಗಳಲ್ಲಿ ಪಕ್ಷಭೇದ ಮರೆತು ಹೋರಾಡುತ್ತಿದ್ದಾರೆ. ಇವತ್ತು ತಾವು ಏನು ಬಿಲ್ ಪಾಸ್ ಮಾಡಿದ್ದೀರಿ, ನಾನು ಬಿಲ್ ಪಾಸ್ ಮಾಡಬೇಡಿ ಎಂದು ಹೇಳಿದೆ. ಮೊನ್ನೆ ಕೂಡ ಪತ್ರಿಕೆಯಲ್ಲಿ ಬಂದಿದೆ, 4,081 ಕೋಟಿ ರೂ. ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬಂದಂತಹ ಹಣವನ್ನು ಕೊಡುತ್ತಿಲ್ಲ. ನೀವು ರಾಜೀವ್‌ಗಾಂಧಿಯವರ ಕಾರ್ಯಕ್ರಮವನ್ನು ಡೀವಿಯೇಷನ್ ಮಾಡಿದ್ದೀರಿ. Constitution amendment ಮಾಡುವುದಕ್ಕೆ ನಾವು ಹೊರಟಿದ್ದೇವೆ. ಆ ಬಗ್ಗೆ ಕೂಡ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಕೌನ್ಸಿಲ್‌ನಲ್ಲಿ ಮಸೂದೆ ಹೋದಾಗ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರು ಪಕ್ಷಭೇದ ಮರೆತು ರಾಜ್ಯಪಾಲರನ್ನು ಭೇಟಿಯಾಗಿದ್ದಾರೆ. ರಾಜ್ಯಪಾಲರು ಇವತ್ತು ಆ ಮಸೂದೆಯನ್ನು ಹಿಂದಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಇದರ ಬಗ್ಗೆ ಮರು ಚಿಂತನೆ ಮಾಡಬೇಕು. clause by clause ಎಲ್ಲಿ ತಾವು ಎಡವಿದ್ದೀರಿ, ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನರ ಹಕ್ಕನ್ನು ವಿಧಾನಸಭೆಯಲ್ಲಿ ಕುಳಿತು ಕಿತ್ತುಹಾಕತಕ್ಕಂತಹ ಕೆಲಸವನ್ನು ಮಾಡಿದ್ದೀರಿ ಎಂದು ರಾಜ್ಯಪಾಲರು ಹೇಳಿದ್ದಾರೆ. ಇದು ಛೀಮಾರಿ ಅಲ್ಲವಾ? ಎಷ್ಟು ವಿಷಯಗಳಲ್ಲಿ ಇವತ್ತು ರಾಜ್ಯಪಾಲರು ವಾಪಸ್ ಕಳುಹಿಸುತ್ತಿದ್ದಾರೆ? ನಾವು ಯಾರಿಗೆ ಹೇಳಬೇಕು, ಮುಖ್ಯ ಕಾರ್ಯದರ್ಶಿಯವರಿಗೆ ನಾವು ಯಾವುದಾದರೂ ಸಮಸ್ಯೆಗಳ ಬಗ್ಗೆ ಮಾತನಾಡಿದರೆ, ಎಲ್ಲಿ ಹೋಗಿದ್ದಾರೆಂದರೆ ಹೈಕೋರ್ಟಿಗೆ ಹೋಗಿದ್ದಾರೆಂದು

ಹೇಳುತ್ತಾರೆ. ಏಕೆ ಹೋಗಿದ್ದಾರೆ ಎಂದರೆ non-bailable warrant issue ಆಗಿದೆ ಎಂದು ಹೇಳುತ್ತಾರೆ. ಇದರ ಅರ್ಥವೇನು? ಮಂತ್ರಿಗಳ ಮಧ್ಯದಲ್ಲಿ co-ordination ಇಲ್ಲ. ಅವರ ಕಚ್ಚಾಟ ಹೊರಹಡೆ ಬರುತ್ತಿದೆ. ಸರ್ಕಾರದಲ್ಲಿ ಗೌಪ್ಯತೆ ಇರಬೇಕಾಗಿದ್ದುದು ವಿಚಾರಗಳು ಬಹಿರಂಗವಾಗುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳತಕ್ಕಂಥಾದ್ದು ಏನೆಂದರೆ, one to one, you have to talk with all the ministers. ಹೊರಗಡೆ ಬಂದರೆ administration ಹೇಗೆ ನಡೆಯುತ್ತದೆ? ಸನ್ಮಾನ್ಯ ಯಡಿಯೂರಪ್ಪನವರು 3ನೇ ತಾರೀಖಿನ ಪ್ರತೀಕ್ಷೆಯಲ್ಲಿದ್ದಾರೆ. ಯಡಿಯೂರಪ್ಪನವರು ನನ್ನನ್ನು ನೋಡಿ ಆದರೂ ಪ್ರತೀಕ್ಷೆ ಮಾಡಬೇಡಿ. ಇವತ್ತು ರಾಜ್ಯದಲ್ಲಿ ನನ್ನ ಗತಿ ಏನಾಗಿದೆ, ಮೂರನೇ ತಾರೀಖು ಮುಖ್ಯಮಂತ್ರಿ ಆಗತಕ್ಕಂತಹ ಪ್ರತೀಕ್ಷೆ ಏನು ಮಾಡುತ್ತಿದ್ದೀರಿ, ದೇವರಿಗೆ ನಮಸ್ಕಾರ ಹಾಕುತ್ತಿದ್ದೀರಿ, ಅದು ಬಿಟ್ಟು ನಿಷ್ಪುರವಾದ ಜನರ ಅಭಿಪ್ರಾಯದ ಮೇರೆಗೆ ಸಪೋರ್ಟ್ ವಿತ್‌ಡ್ರಾ ಮಾಡಿ. ಇವತ್ತು ರಾಜ್ಯದಲ್ಲಿ ಚುನಾವಣೆ ಆಗಲಿ, ರಾಜ್ಯದಲ್ಲಿ ಚುನಾವಣೆ ಆದರೆ ಕರ್ನಾಟಕ ರಾಜ್ಯದಲ್ಲಿ ನಿಚ್ಚಳ ಬಹುಮತದಿಂದ ಕಾಂಗ್ರೆಸ್ ಪಕ್ಷ ಆಡಳಿತ ನಡೆಸುತ್ತಿದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು : ನಿಮಗೋಸ್ಕರ ಮಾನ್ಯ ಯಡಿಯೂರಪ್ಪನವರು ರಾಜೀನಾಮೆ ಕೊಡಬೇಕಾ? ಸರ್ಕಾರಕ್ಕೆ ಕೊಟ್ಟಿರುವ ಬೆಂಬಲ ವಾಪಸ್ ತೆಗೆದುಕೊಳ್ಳಬೇಕಾ? ಇದು ಯಾವ ನ್ಯಾಯ ಹೇಳಿ? ತಾವು ಈ ತರಹದ ಕನಸು ಏಕೆ ಕಾಣುತ್ತಿದ್ದೀರಿ?

ಶ್ರೀ ಎನ್. ಧರ್ಮಸಿಂಗ್ : ಅಧಿಕಾರ ಹಸ್ತಾಂತರ ಎನ್ನುವ ಮಾತು ಪ್ರಸ್ತಾಪ ಆದಾಗ There is no stability in the Government. ಜಿಲ್ಲಾಧಿಕಾರಿಗಳು ಕೆಲಸ ಮಾಡುವುದಿಲ್ಲ. ಅಧಿಕಾರಿಗಳೂ ಕೆಲಸ ಮಾಡುವುದಿಲ್ಲ. ಅಲ್ಲದರ ಮೇಲೆ ಅವರು ಹಿಡಿತ ಇಡಬೇಕಾಗುತ್ತದೆ. ಈ ರೀತಿಯಾದ ಗೊಂದಲ ಕರ್ನಾಟಕ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಹೇಳುತ್ತಾರೆ, ಅದು blackmail ಎಂದು ನನಗನ್ನಿಸುವುದಿಲ್ಲ, ಪಾಪ, ಸರಳವಾಗಿ ಹಾಗೆಯೇ ಹೇಳುತ್ತಾರೆ. ನಿಮಗೆಲ್ಲಾ ತೆಗೆಯುತ್ತೇನೆಂದು ಹೇಳಿ 18 ತಿಂಗಳುಗಳಾದವು. 282 ಭೂತಗಳ್ಳರು ಇದ್ದಾರೆ, ನಾನು ಮಾಹಿತಿ ಇಡುತ್ತೇನೆಂದು ಹೇಳಿದರು. Who are you? You have constituted a Committee. ಮಾನ್ಯ ರಾಮಸ್ವಾಮಿಯವರು

ಛೇರ್ಮನ್ ಆಗಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ಮೊನ್ನೆ ಕೂಡ interim report ಕೊಟ್ಟಿದ್ದಾರೆ. You are the Chief Minister. ನೀವು ಅದಕ್ಕೆ Committee constitute ಮಾಡಿದ್ದೀರಿ. That Committee has to place a report before the House. 282 ಜನ ಭೂಗಳ್ಳರು ಇದ್ದಾರೆಂದು ನೀವು ಹೇಳಿದಿರಿ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಎಲ್ಲಿ ಕ್ರಮ ತೆಗೆದುಕೊಂಡಿರಿ? Blackmailing tactics ಸರಿಯಲ್ಲ. ನಾವೂ ಜನಪ್ರತಿನಿಧಿಗಳು ಸದಸ್ಯರಾಗಿದ್ದೇವೆ, ತಾವೂ ಕೂಡ ಇದ್ದೀರಿ. ಇದು ಸರ್ಕಾರ ನಡೆಸತಕ್ಕಂತಹ ರೀತಿನೀತಿ ಅಲ್ಲ ಎನ್ನತಕ್ಕಂತಹ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು S E Z ಬಗ್ಗೆ ಹೇಳಿದ್ದಾರೆ. ನಾವು ಅದರ ಬಗ್ಗೆ ಚರ್ಚೆ ಮಾಡುವುದಕ್ಕಾಗಿಯೇ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮನ್ನು ಕೇಳುವವರಿದ್ದೇವೆ. ಇವರು ಕಡಿದಾಳ್ ಮಂಜಪ್ಪನವರ ಶತಮಾನೋತ್ಸವ ಸಮಾರಂಭಕ್ಕೆ ಹೋಗುತ್ತಾರೆ. ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಕಡಿದಾಳ್ ಮಂಜಪ್ಪನವರು ಮಾಡಿರುವ ಸೇವೆ ಶ್ಲಾಘನೀಯವಾಗಿರತಕ್ಕಂಥದ್ದು. ಈಗ ಇವರೇನು ಹೇಳಿದ್ದಾರೆಂದರೆ S E Z ವಿಚಾರದಲ್ಲಿ ನಾವು open mind ಇದ್ದೇವೆಂದು ಹೇಳಿದ್ದಾರೆ. ಆದರೆ ನೀವು ಇಂದು ರೈತರ ಜಮೀನುಗಳನ್ನು ವಶಪಡಿಸಿಕೊಳ್ಳುವಂಥ ರೀತಿಯಲ್ಲಿ ಹೊರಟಿದ್ದೀರಿ. Nanjundappa Committee Report ಇದೆ. ಈಗ 39 ತಾಲ್ಲೂಕುಗಳಲ್ಲಿ ಎಲ್ಲಿ ಭೂಮಿ ಇದೆ, ಅಂಥ ಜಮೀನುಗಳನ್ನು ಮಾತ್ರ ಅಕ್ವೈರ್ ಮಾಡಬೇಕೆಂದು ನಿಯಮ ಇದೆ. ಮೊನ್ನೆ ನಮ್ಮ ಖರ್ಗೆಯವರ ನೇತೃತ್ವದಲ್ಲಿ ನಾನು ಸಿದ್ದರಾಮಯ್ಯನವರು ಮತ್ತು ಎಲ್ಲರೂ ನಂದಗುಡಿಗೆ ಹೋಗಿದ್ದೆವು. ಅಲ್ಲಿ ರೈತರು ಅಳುವುದನ್ನು ನೋಡುವುದಕ್ಕಾಗಲಿಲ್ಲ. ಇದರ ಬಗ್ಗೆ ನೀವೇನು ಹೇಳಿದಿರಿ, ಮರು ಪರಿಶೀಲನೆ ಮಾಡುತ್ತೇವೆಂದಿರಿ. ಅವತ್ತೇ ನಾವು ನಿಮಗೆ ಕೇಳಿದ್ದೆವು. ಅವರು ಇರಲಿಲ್ಲ, ಮುಖ್ಯಮಂತ್ರಿಗಳು ಹೌಸ್‌ಗೆ ಬಂದಾಗ ಹೇಳಬೇಕು ಎನ್ನತಕ್ಕಂಥದ್ದಾಗಿತ್ತು. ಇವತ್ತು S E Z ನಲ್ಲಿ 33 ಪ್ರಸ್ತಾವನೆಗಳನ್ನು ನೀವು ಕೇಂದ್ರ ಸರ್ಕಾರಕ್ಕೆ ಏನು ಕಳುಹಿಸಿದ್ದೀರಿ, ಅವುಗಳನ್ನು ಈ ಸದನದಲ್ಲಿ ಇಡಬೇಕು. ಯಾರನ್ನು consult ಮಾಡಿ ಕಳುಹಿಸಿದ್ದೀರಿ? ಸುಪ್ರೀಂಕೋರ್ಟ್ ಹೇಳಿರುವಂತೆ ಕೇಂದ್ರ ಸರ್ಕಾರದ ನಿಲುವು ಕೂಡ ಇದೆ. ರೈತರ ಜೊತೆ

ವಿಚಾರಣೆ ಮಾಡದೇ ಭೂಮಿಯನ್ನು ಅಕ್ವೈರ್ ಮಾಡಬಾರದು ಎನ್ನತಕ್ಕಂಥದ್ದು ಇದೆ. ಇವತ್ತು S E Z ಬಗ್ಗೆ ಸಾಕಷ್ಟು ಗೊಂದಲ ಸೃಷ್ಟಿಯಾಗಿದೆ. ಇದರ ಬಗ್ಗೆ ನಾವು ಚರ್ಚೆ ಮಾಡಲು ಬೇರೆ ರೂಪದಲ್ಲಿ ತರಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇವೆ. ಏಕೆ ತಾವು ಹೇಳಿಕೆ ನೀಡಿದಿರಿ? ಇವತ್ತು ಐ.ಎ.ಎಸ್.ಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ನನಗೆ ಗೊತ್ತು. You are the Chief Minister. You have got the prerogative. That is your right. ನೀವು ಮಾಡಿದ್ದೀರಿ. ಆದರೆ ಯಡಿಯೂರಪ್ಪನವರು ಗಫ್ ಅಂತ ಕುಳಿತಿದ್ದಾರೆ. ಇದೇ ಸಂದರ್ಭ ಅಂತ ಹೇಳಿ ಸೀನಿಯರ್ ಐ.ಎ.ಎಸ್. ಆಫೀಸರ್ಸ್‌ಗಳ ಟ್ರಾನ್ಸ್‌ಫರ್ ಆಯಿತು. ಮೊನ್ನೆ ಕೆ.ಎ.ಎಸ್. ಆಫೀಸರ್ಸ್ ಟ್ರಾನ್ಸ್‌ಫರ್ ಆಗಿದೆ. They are the Returning Officers of the election. ಅಂದರೆ ನಿಮ್ಮ ಲೆಕ್ಕ ಏನಿದೆಯೆಂದರೆ, ಅಸೆಂಬ್ಲಿ ಎಲೆಕ್ಷನ್ ಮುಂದಿಟ್ಟು ಕೊಂಡು ನೀವು ಇದನ್ನು ಮಾಡುತ್ತಿದ್ದೀರಾ? ಮೇಲಿಂದ ಮೇಲೆ ವರ್ಗಾವಣೆ ಮಾಡುತ್ತಿದ್ದೀರಿ. ಇವತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರಿಗಳಿಗೆ ಸಾಮಾಜಿಕ ನ್ಯಾಯವಿಲ್ಲವಾಗಿದೆ. ಇವತ್ತು ಮುಖ್ಯಮಂತ್ರಿಗಳಾದವರು ಅಧಿಕಾರಿಗಳ ಬಗ್ಗೆ ಏನೊಂದು ಜನಾಭಿಪ್ರಾಯವಿರುತ್ತದೆ, ಅದನ್ನು ಮುಂದಿಟ್ಟುಕೊಂಡು ಹೋಗಬೇಕಾಗುತ್ತದೆ. ಮೊನ್ನೆ ಕೂಡ ಒಂದು ವಿಷಯ ಹೇಳಿದ್ದೆ. ಎಸ್‌ಸಿ:ಎಸ್‌ಟಿ ವರ್ಗದ ಜನರ ಫಲಾನುಭವಿಗಳಿಗೆ ಸಬ್ಸಿಡಿ ಕೊಡಬೇಕಾಗಿರುವ ವಿಚಾರದ ಬಗ್ಗೆ ಹೇಳಿದ್ದೆ. ನಮ್ಮ ಕಾಲದಲ್ಲಿ ನಾವು ಕೊಟ್ಟಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾದ ಜಾರಕಿಹೊಳಿಯವರು ಏನು ಹೇಳಿದ್ದಾರೆಂದರೆ 71 ಕೋಟಿ ಬಿಡುಗಡೆ ಬಗ್ಗೆ ಹೇಳಿದ್ದಾರೆ. ಇದನ್ನು ನಾವೇನು ಹೇಳುತ್ತಿಲ್ಲ. ಇವರು ಹೇಳಿದರು 25 ಕೋಟಿ ಇದ್ದಾಗ ಖಜಾನೆ ತುಂಬಿದೆ, ಕೊಡುತ್ತೇವೆಂದು ಹೇಳಿದ್ದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಕಳೆದ ಬಾರಿಯ ಬಜೆಟ್‌ನಲ್ಲಿ ಮಾನ್ಯ ಯಡಿಯೂರಪ್ಪನವರೆ ಎದ್ದುನಿಂತು ಹೇಳಿದ್ದರು, ನಾವು ಹಣ ಕೊಡುತ್ತಿದ್ದೇವೆ, ಎಲ್ಲಿ ಕೊಟ್ಟಿದ್ದೀರಿ ಸ್ವಾಮಿ? ಇನ್ನು 71 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಎಂ.ಬಿ.ಬಿ.ಎಸ್., ಇಂಜಿನಿಯರಿಂಗ್ ಶಿಕ್ಷಣ ಮಾಡುತ್ತಿರುವ ಎಸ್.ಸಿ:ಎಸ್.ಟಿ ವರ್ಗದ ವಿದ್ಯಾರ್ಥಿಗಳು ರಾಜ್ಯದಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗಬೇಕಾಗಿದೆ. 30

ಸಾವಿರ ಅಪ್ಲಿಕೇಶನ್‌ಗಳು ಬಂದಿದ್ದರೂ ಕೂಡ ಅದರಲ್ಲಿ 10 ಸಾವಿರ ಅಪ್ಲಿಕೇಶನ್‌ಗಳ ಬಗ್ಗೆ ಕೂಡ ಇತ್ಯರ್ಥವಾಗುತ್ತಿಲ್ಲ. ಇವತ್ತು ಜನಗಳಿಗೆ ಸಾಮಾಜಿಕ ನ್ಯಾಯವನ್ನು ಸರ್ಕಾರ ಏನು ಕೊಡಬೇಕಾಗಿತ್ತೊ, ಏನು ಪ್ರೊಟೆಕ್ಷನ್ ಅನ್ನು ಕೊಡಬೇಕಾಗಿತ್ತೋ ಆ ಒಂದು ದಿಸೆಯಲ್ಲಿ ಕೆಲಸ ಮಾಡತಕ್ಕಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿಲ್ಲ. ಎಲ್ಲ ರೀತಿಯ ವಿಷಯ ಗಳಲ್ಲಿಯೂ ಈ ರೀತಿ ಇದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಆಡಿಟರ್ ಜನರಲ್‌ರವರಿಂದ ಬಂದಿರುವ ಒಂದು ರಿಪೋರ್ಟ್ ಕೂಡ ಇದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು. ನಾನೂ ಕೂಡ ಕಳೆದ ಹದಿಮೂರು, ಹದಿನಾಲ್ಕು ವರ್ಷಗಳಿಂದ ಶಾಸನಸಭೆಗೆ ಸದಸ್ಯನಾಗಿ ಬರುತ್ತಿದ್ದೇನೆ. ಮಂತ್ರಿಗಳಿಂದ ರಿಪ್ಲೈಸ್ಟಾರ್ಟ್ ಆದಮೇಲೆ ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಿರುವುದು ಇದೇ ಮೊದಲ ಬಾರಿ. ಸದನ ನಿಯಮಾವಳಿ ಪ್ರಕಾರ ಹೋಗಬೇಕು. ರಿಪ್ಲೈ ಮೊನ್ನೆಯಿಂದ ಸ್ಟಾರ್ಟ್ ಆಗಿದೆ. ಸೆಕೆಂಡ್ ಟೈಂ ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಿದ್ದಾರೆ. ನನಗೂ ಕೂಡ ಇನ್ನೊಂದು ಸಾರಿ ಮಾತನಾಡಲು ಅವಕಾಶ ಕೊಡುವುದಾದರೆ ನಾವೂ ಕೂಡ ಕೆಲವು ವಿಚಾರಗಳನ್ನು ಆಲೋಚನೆ ಮಾಡಿಕೊಂಡು ಬಂದಿದ್ದೇವೆ, ಅದನ್ನು ಹೇಳಲು ನಮಗೂ ಕೂಡ ಅವಕಾಶವನ್ನು ಕೊಡಬೇಕು.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್ : ಆಯಿತು, ಇನ್ನೇನು ಮಾತನಾಡುವುದನ್ನು ಮುಗಿಸುತ್ತೇನೆ. Financial crisis in the State. ಇವತ್ತು ಆಡಳಿತದ ದೃಷ್ಟಿಯಿಂದಲೂ ಕೂಡ ಈ ಸಮ್ಮಿಶ್ರ ಸರ್ಕಾರ ಯಶಸ್ವಿಯಾಗಿ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಈಗಾಗಲೇ ನಾವು ಯಾವ ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ, ಅದರ ಬಗ್ಗೆ ನಿಗಾ ವಹಿಸಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಈಗ ಬಹಳ ಜನ ಮಂತ್ರಿಗಳಿಂದ ಉತ್ತರ ಕೊಡಿಸುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ರೀತಿಯಾಗುವುದಿಲ್ಲ. ಎಲ್ಲ ಮಂತ್ರಿಗಳೂ ಕೂಡ ಉತ್ತರವನ್ನು ಕೊಡಬೇಕು. ಎಲ್ಲಾ ಮಂತ್ರಿಗಳು ಅವರವರ ಖಾತೆ ಮೇಲೆ ಉತ್ತರ ಕೊಟ್ಟ ಮೇಲೆ ಬೇಕಾದರೆ

ಇವರು ಹೇಳಲಿ. ಎಲ್ಲಾ ಮಂತ್ರಿಗಳು ಉತ್ತರವನ್ನು ಕೊಡಲೇಬೇಕು. 29 ಬೇಡಿಕೆಗಳು ಇದ್ದರೂ ಕೂಡ ತಾವೇ ಈ ರೀತಿ ಹೇಳಿಬಿಟ್ಟರೆ ಹೇಗೆ ಅಧ್ಯಕ್ಷರೆ. ನಾನು ಮೊನ್ನೆ ಕೂಡ ಮಾತನಾಡುವ ಮೊದಲು ನಿಮಗೆ ಹೇಳಿದ್ದೆ. ಪ್ರತಿಯೊಂದು ಇಲಾಖೆಯ ಮಂತ್ರಿಗಳು ಉತ್ತರ ಕೊಡಲಿ.

ಅಧ್ಯಕ್ಷರು : ನಾನು ಏಕೆ ಹೇಳಿದೆನೆಂದರೆ ಉತ್ತರ ಮುಗಿದು ಕ್ಲಾರಿಫಿಕೇಶನ್ ಮುಗಿಸಿ ತದನಂತರ ಪಾಸ್ ಆದಮೇಲೆ ವಿಧಾನ ಪರಿಷತ್ತಿಗೆ ಇದು ಹೋಗಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹಿಂದೆಲ್ಲಾ ನಡೆದಿರುವುದು ಏನು, ಒಂದು ಬೇಡಿಕೆ, ಅದರ ಮೇಲೆ ಚರ್ಚೆ. ಮಂತ್ರಿಗಳಿಂದ ಉತ್ತರ, ಮತ್ತೆ ಮತದಾನ, ಹೀಗೆ ಒಂದೊಂದು ಇಲಾಖೆ ಬೇಡಿಕೆ ಮೇಲೂ ಕೂಡ ನಡೆದುಕೊಂಡು ಬಂದಿದೆ. ಆದರೆ, ಈಗ ಒಟ್ಟಿಗೆ 29 ಬೇಡಿಕೆಗಳನ್ನು ಹಾಕಿದ್ದೀರಿ. ನಾವ್ಯಾರೂ ಕೂಡ 29 ಬೇಡಿಕೆಗಳ ಮೇಲೂ ಮಾತನಾಡುವುದಕ್ಕೆ ಆಗಲಿಲ್ಲ. ನಾವೆಲ್ಲೋ ಒಂದೋ ಎರಡೋ ಬೇಡಿಕೆ ಮೇಲೆ ಮಾತನಾಡಿದ್ದೇವೆ. 29 ಬೇಡಿಕೆಗಳ ಮೇಲೂ ಮಾತನಾಡಲು ಹೊರಟಿದ್ದರೆ ದಿನಗಟ್ಟಲೆ ಹಿಡಿಯುತ್ತಿತ್ತು. ನಾವು ಅನೇಕ ವಿಚಾರಗಳನ್ನು ಮಾತನಾಡಬೇಕಾಗಿದ್ದು ಇತ್ತು. ಆದರೂ ಕೂಡ ಕನಿಷ್ಟ ಎಲ್ಲಾ ಮಂತ್ರಿಗಳನ್ನು ತಮ್ಮ ಇಲಾಖಾ ಬೇಡಿಕೆ ಮೇಲೆ ಉತ್ತರ ಕೊಡುವಾಗ ಮಧ್ಯೆ ಪ್ರವೇಶ ಮಾಡಿ ಕ್ಲಾರಿಫಿಕೇಶನ್ ಕೇಳುವುದಕ್ಕೆ ನಮಗೆ ಅವಕಾಶವಿರುತ್ತದೆ. ಎಲ್ಲಾ ಮಂತ್ರಿಗಳಿಗೂ ಉತ್ತರ ಕೊಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ, ಕೇವಲ ಇಬ್ಬರೂ-ಮೂವರು ಮಂತ್ರಿಗಳು ಮಾತನಾಡಲಿ ಎಂದರೆ ಅದು ಸಾಧ್ಯವಾಗುವುದಿಲ್ಲ. ಪ್ರತಿ ಮಂತ್ರಿಯೂ ಕೂಡ ಅವರ ಇಲಾಖೆ ಬೇಡಿಕೆ ಮೇಲೆ ಉತ್ತರವನ್ನು ಕೊಡಲೇಬೇಕಾಗುತ್ತದೆ. ಅದು ಮಾಡಬೇಕಾದ ಕರ್ತವ್ಯವಾಗಿರುತ್ತದೆ. ಆ ರೀತಿ ಮಾಡದಿದ್ದರೆ ಅದು ಸರಿಯಾದ ಕ್ರಮವಾದಂತಾಗುವುದಿಲ್ಲ.

ಅಧ್ಯಕ್ಷರು : ಆ ರೀತಿಯೆಲ್ಲಾ ಆಗುವುದಿಲ್ಲ. ಏಕೆಂದರೆ ಮೇಲ್ಮನೆಗೆ ಹೋಗಬೇಕಾಗುತ್ತದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಈಗ ಒಂದು ಕೆಲಸ ಮಾಡಿ ಅಧ್ಯಕ್ಷರೆ. ನೀವು ಹೇಳಿದ ಹಾಗೆ ಇವರು ಕೇಳಿದರೆ ಆಯಿತು. ಇಲ್ಲದೇ

ಹೋದರೆ ರೇವಣ್ಣನವರ ಕೈಯಲ್ಲಿ ಇನ್ನೊಂದು ಸಲ ರಿಪ್ಲೈ ಮಾಡಿಸುತ್ತೇನೆ ಎಂದು ಹೇಳಿಬಿಡಿ. ಆಗ ಎಲ್ಲರೂ ಸುಮ್ಮನಾಗಿಬಿಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಕಳೆದ ಬಾರಿ ಯಾರಿಗೂ ರಿಪ್ಲೈ ಕೊಡುವುದಕ್ಕೆ ಬಿಡದೇ ಕೊನೆಗೆ ಗಿಲೊಟಿನ್‌ಗೆ ಹಾಕಿದ್ದಾಯಿತು. ಈ ಸಾರಿ ಇಷ್ಟರಮಟ್ಟಿಗೆ ಸ್ವಾಗತಾರ್ಹವಾಗಿದೆ. ಕನಿಷ್ಟ ನಮ್ಮ ಸ್ನೇಹಿತರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ರೇವಣ್ಣನವರು ಮೊನ್ನೆ ರಿಪ್ಲೈ ಕೊಟ್ಟಿದ್ದಾರೆ. ಎಲ್ಲಾ ಮಂತ್ರಿಗಳೂ ಕೂಡ ರಿಪ್ಲೈ ಕೊಡುವುದಕ್ಕೆ ತಯಾರಾಗಿದ್ದಾರೆ. ನೀವು ಸಮಯ ನಿಗದಿ ಮಾಡುವುದಾದರೆ ನಮ್ಮದೇನೂ ಅಡ್ಡಿಯಿಲ್ಲ. ಸಮಯ ಉಂಟೆ? ನಮ್ಮ ರೂಲಿಂಗ್ ಪಾರ್ಟಿಯವರು ಭಾಷಣ ಮಾಡಬೇಕಾಗಿತ್ತು. ಸಮಯದ ಅಭಾವದಿಂದ ಅದನ್ನೂ ತಾವು ಕಟ್ ಮಾಡಿದಿರಿ.

ಶ್ರೀ ಆರ್.ವಿ.ದೇಶಪಾಂಡೆ : ಮಂತ್ರಿಗಳು ಉತ್ತರ ಕೊಡುವ ವಿಚಾರದ ಬಗ್ಗೆ ನೀವು ಮಧ್ಯೆ ಪ್ರವೇಶ ಮಾಡಿ ಹೇಳಬಾರದು. ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವ ಇಲಾಖೆಗೆ ಮಂತ್ರಿಗಳಾಗಿದ್ದೇವೆ ಎಂಬುದಾದರೂ ಮಂತ್ರಿಗಳಾದವರಿಗೆ ಗೊತ್ತಾಗಲಿ. ನಾವು ಯಾವ ಇಲಾಖೆಯಲ್ಲಿದ್ದೇವೆಂದು ಅರ್ಥ ಮಾಡಿಕೊಳ್ಳುವುದಕ್ಕಾದರೂ ಮಂತ್ರಿಗಳಿಂದ ಉತ್ತರ ಕೊಡುವಂತೆ ಮಾಡಿ.

ಶ್ರೀ ನಿ.ಲ.ನರೇಂದ್ರಬಾಬು : ಎಲ್ಲವನ್ನೂ ಮುಖ್ಯಮಂತ್ರಿಗಳೇ ಹೇಳುವಂತೆ ಮಾಡಬೇಡಿ. ಯುವಜನ ಸೇವಾ ಇಲಾಖೆ ಮಂತ್ರಿಗಳಿಂದಲೂ ಕೂಡ ತಾವು ಉತ್ತರ ಕೊಡಿಸಬೇಕು.

ಅಧ್ಯಕ್ಷರು : ಆಯಿತು. ಈಗ ನೀವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳೇ ಈಗ ಉತ್ತರ ಕೊಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಅವರ ಇಲಾಖೆ ಬೇಡಿಕೆ ಮೇಲೆ ಚರ್ಚೆ ನಡೆದಾಗ ಅವರು ಇಲ್ಲಿ ಇರಲೇ ಇಲ್ಲ. ಆದರೂ ಚಿಂತೆಯಿಲ್ಲ. ಮುಖ್ಯಮಂತ್ರಿಗಳು ಭಾಷಣ ಮಾಡಿದರೆ ನಾವು ಅಡ್ಡಿಪಡಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ವಾಟಾಳ್‌ರವರೆ, ನಾನು ಆಗಿನಿಂದ ನೋಡುತ್ತಿದ್ದೇನೆ. ನೀವು ಆ ಕಡೇನೂ ಹೇಳುತ್ತೀರಿ, ಈ ಕಡೇನೂ ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಖರ್ಗೆಯವರೆ, ಆ ಕಡೆ, ಈ ಕಡೆ ನಿಮ್ಮದು ನಡೆಯುತ್ತಿದೆ. ನನಗಿಂತ ಹೆಚ್ಚಾಗಿ ಯಾವ ಕಡೆ ಎಂಬುದನ್ನು ನೀವು ಹೇಳಬೇಕು.

ಆ) ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ :

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಿರಿಯ ಸದಸ್ಯರುಗಳೆಲ್ಲರೂ ಕೂಡ ಮಾತನಾಡಿ ಪ್ರತಿಯೊಬ್ಬ ಮಂತ್ರಿಗಳೂ ಕೂಡ ಅವರ ಇಲಾಖಾ ಬೇಡಿಕೆ ಮೇಲೆ ಉತ್ತರವನ್ನು ಕೊಡಬೇಕೆಂದು ಏನು ಬಯಸುತ್ತಿದ್ದಾರೆ, ನಾನು ಅವರಲ್ಲಿ ಒಂದು ಮನವಿಯನ್ನು ಮಾಡಬಯಸುತ್ತೇನೆ. ನಾನು ಮತ್ತು ಉಪ ಮುಖ್ಯಮಂತ್ರಿಗಳು ಕಳೆದ ಎಂಟು ಹತ್ತು ದಿವಸಗಳಿಂದ ಈ ಆಯವ್ಯಯಕ್ಕೆ ಒಪ್ಪಿಗೆಯನ್ನು ಪಡೆಯುವುದಕ್ಕೆ ಪೂರಕವಾಗಿ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾನ್ಯ ಸದಸ್ಯರುಗಳು ಏನು ಮಾಡಿದ್ದಾರೆ, ಅದಕ್ಕೆ ನಾವು ಕೊಡತಕ್ಕಂಥ ಉತ್ತರ ನಿಮಗೆ ಸಂತೃಪ್ತಿ ತರದೇ ಇದ್ದರೆ, ನಂತರ ಮತ್ತೆ ಬೇಕಾದರೆ ಆ ಇಲಾಖೆ ಸಚಿವರುಗಳೇ ಬೇಕಾದರೆ ನಿಮಗೆ ಸಮಜಾಯಿಷಿ ಕೊಡುತ್ತಾರೆ. ಈಗಾಗಲೇ ವಿರೋಧ ಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಅದು ಸಮಾಜ ಕಲ್ಯಾಣ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು, ನಮ್ಮ ಕಾಲದಲ್ಲಿ ಕೊಟ್ಟಿರತಕ್ಕಂಥ ರೀತಿಯಲ್ಲಿ ಹಣವನ್ನು ಈಗ ನಿಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಸರಿಯಾಗಿ ಕೊಟ್ಟಿಲ್ಲವೆಂದು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಎಲ್ಲಾ ಸುದೀರ್ಘವಾಗಿ ನಮ್ಮ ಹಣಕಾಸು ಸಚಿವರು ಈ ಸಭೆಯ ಮುಂದೆ ಎಲ್ಲಾ ಅಂಕಿಅಂಶಗಳ ಸಮೇತ ವಿಷಯವನ್ನು ಇಡುತ್ತಾರೆ. ಅಂಕಿಅಂಶಗಳ ವಿವರಗಳನ್ನು ನಿಮ್ಮ ಮುಂದೆ ಕೊಡುವುದಕ್ಕೆ ತಯಾರಾಗಿದ್ದೇವೆ, ಇದರಲ್ಲಿ ಯಾವುದನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ ಹಾಗೂ ಸುಳ್ಳು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಎಲ್ಲಾ ಇಲಾಖೆ ಸಚಿವರಿಗೆ ಅವರವರ ಇಲಾಖೆ ಬಗ್ಗೆ ಹೇಳುವುದಕ್ಕೆ ಸಮಯದ ಅಭಾವವಿರುವಂತಹ ಸಂದರ್ಭದಲ್ಲಿ ಮಾನ್ಯ ಸಾರಿಗೆ ಸಚಿವರು ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಏಕೆಂದರೆ ಮಾನ್ಯ ರಮೇಶ್‌ಕುಮಾರ್‌ರವರು